

# ಸುಮನ್ ಕಿತ್ತೂರು ದಾಂಪತ್ಯದ ಕೋನರು

‘ಕಿರಗೂರಿನ ಗಯ್ಯಾಳಿಗಳು’ ಸಿನಿಮಾ ನಂತರ ಸುಮನ್ ಕಿತ್ತೂರು ಚಿತ್ರರಂಗದಿಂದ ಮಾಯವಾಗಿದ್ದರು. ಆಗಾಗ ಫೇಸ್‌ಬುಕ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದರೂ ಅವರು ಎಲ್ಲಿದ್ದಾರೆ ಏನು ಮಾಡುತ್ತಿದ್ದಾರೆ ಎಂಬುದರ ಪತ್ತೆ ಇರಲಿಲ್ಲ. ಆದರೆ ದೇಶವೇ ಲಾಕ್‌ಡೌನ್‌ನಲ್ಲಿ ಬಂಧಿಯಾಗಿರುವಾಗ ಸುಮನ್ ವಿವಾಹಬಂಧನಕ್ಕೆ ಒಳಗಾಗುವುದರ ಮೂಲಕ ಸುದ್ದಿಯಾಗಿದ್ದಾರೆ. ಅವರದು ಕೊರೊನಾ ಕಾಲದ ಸರಳ ಮದುವೆ. ಪ್ರಗತಿಪರ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದ ಸುಮನ್, ಕೊರೊನಾ ಇಲ್ಲದಿದ್ದರೂ ಅಷ್ಟೇ ಸರಳವಾಗಿ ವಿವಾಹವಾಗುತ್ತಿದ್ದರೇನೋ.

ಅಂದಹಾಗೆ, ಅವರ ಜೊತೆಗೆ ದಾಂಪತ್ಯ ಜೀವನಕ್ಕೆ ಅಡಿಯಿಟ್ಟ ಹುಡುಗನ ಹೆಸರು ಶ್ರೀನಿವಾಸ್. ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್. ಬಹುಕಾಲದ ಸ್ನೇಹಿತನ ಜೊತೆಗೇ ಸುಮನ್, ದಾಂಪತ್ಯದ ಸುಮದ ಹಾದಿಯಲ್ಲಿ ಹೆಜ್ಜೆಗಳನ್ನು ಊರಿದ್ದಾರೆ. ಇತ್ತೀಚೆಗೆ ಪುದುಚೇರಿಯಲ್ಲಿ ಅವರ ವಿವಾಹ ನಡೆದಿದೆ.

ಪತ್ರಕರ್ತೆಯಾಗಿದ್ದ ಸುಮನ್, ಚಿತ್ರರಂಗಕ್ಕೆ ಅಡಿಯಿಟ್ಟಿದ್ದು ‘ಆ ದಿನಗಳು’ ಸಿನಿಮಾಕ್ಕೆ ಸಹ ನಿರ್ದೇಶಕಿಯಾಗಿ ಕೆಲಸ ಮಾಡುವುದರ ಮೂಲಕ. ನಂತರ ‘ಸ್ಲಂ ಬಾಲ’ ಸಿನಿಮಾ ಮೂಲಕ ಪೂರ್ಣಪ್ರಮಾಣದ ನಿರ್ದೇಶಕಿಯಾದರು. ಅಲ್ಲಿಂದ ಮುಂದೆ ಅವರು ನಿರ್ದೇಶಿಸಿದ ‘ಕಳ್ಳರ ಸಂತೆ’, ‘ಎದೆಗಾರಿಕೆ’, ‘ಕಿರಗೂರಿನ ಗಯ್ಯಾಳಿಗಳು’ ಎಲ್ಲವೂ ಒಂದಕ್ಕಿಂತ ಒಂದು ಭಿನ್ನ ಕಾರಣಗಳಿಗೆ ಗಮನ ಸೆಳೆದಂಥ ಚಿತ್ರಗಳು. ‘ಕಿರಗೂರಿನ ಗಯ್ಯಾಳಿಗಳು’ ಸಿನಿಮಾ ನಂತರ ಅವರು ತುಸು ಸುಸ್ತಾದವರಂತೆ ಚಿತ್ರರಂಗದಿಂದ ಮೌನವಾಗಿ ಹಿಂದಕ್ಕೆ ಸರಿದಿದ್ದರು. ಈಗ ದಾಂಪತ್ಯ ಜೀವನಕ್ಕೆ ಅಡಿಯಿಟ್ಟಿರುವ ಸುದ್ದಿ ಬಂದಿದೆ.

ಬದುಕಿನ ಈ ಹೊಸ ದಾರಿ ಅವರಲ್ಲಿ ಮತ್ತೆ ಸಿನಿಮಾಪ್ರೀತಿಯನ್ನೂ ಚಿಗುರಿಸಲಿ. ಮತ್ತಷ್ಟು ವಿಭಿನ್ನ ಕಥೆಗಳೊಟ್ಟಿಗೆ ಸುಮನ್, ಸೆಟ್‌ನಲ್ಲಿ ನಿರ್ದೇಶಕಿಯ ಟೋಪಿ ಧರಿಸಿ ಪ್ರತ್ಯಕ್ಷವಾಗಲಿ. ■

# ಕನ್ನಡದ ಖಾನ್ ಕಂಡ ಕನಸು

■ ಪದ್ಮನಾಭ ಭಟ್

ತಂದೆ ರಾಜಕಾರಣಿ. ಹೊಟ್ಟೆಗೆ, ಆಸೆಪಟ್ಟಿದ್ದಕ್ಕೆ ಎಂದಿಗೂ ಕೊರತೆ ಬರದಷ್ಟು ಹಣವಿತ್ತು. ಪ್ರಭಾವವೂ ಇತ್ತು. ತಂದೆಗೆ ಮಗ ಬ್ಯುಸಿನೆಸ್‌ಮೆನ್ ಆಗಲಿ ಎಂಬ ಆಸೆ. ಆದರೆ ಮಗನ ಕನಸೇ ಬೇರೆ. ಆಗಷ್ಟೇ ಬದುಕಿನ ಬಗೆಬಗೆ ಬಣ್ಣಗಳು ತುಂಬಿಕೊಳ್ಳುತ್ತಿದ್ದ ಆ ಹುಡುಗನಿಗೆ ಸಂಜಯ್ ದತ್ ಎಂದರೆ ಪ್ರಾಣ. ಸಂಜು ಬಾಬಾ ತೆರೆಯ ಮೇಲೆ ನೀಳಕೂದಲನ್ನೊಮ್ಮೆ ನೇವರಿಸಿಕೊಂಡು ಖಳರನ್ನು ಬಡಿಯಲು ಸಿದ್ಧನಾದರೆ ಅದನ್ನು ನೋಡುತ್ತಿದ್ದ ಹುಡುಗನ ಕಣ್ಣುಗಳಲ್ಲಿಯೂ ಬಣ್ಣದ ಲೋಕದಲ್ಲಿ ಮಿಂಚುವ ಕನಸು ನಿಧನಿಧಾನಕ್ಕೆ ಹರಳುಗಟ್ಟುತ್ತಿತ್ತು. ಕಾಲ ಕಳೆದಂತೆ, ಮನಸ್ಸು ಬೆಳೆದಂತೆ ಸಿನಿಮಾ ಎಂಬ ಕೊಳಲಿನ ಕರೆಯ ವ್ಯಾಮೋಹಕ್ಕೆ ಮನಸ್ಸು ಶರಣಾಗುತ್ತಲೇ ಹೋಯಿತು. ಅಪ್ಪನ ಆಸೆಯನ್ನು ಕೊಂಚ ಪಕ್ಕಕ್ಕಿರಿಸಿ ತನ್ನ ಕನಸಿನ ಕುದುರೆಯನ್ನೇರಿದ ಆ ಹುಡುಗ ಈಗ ಸಿನಿಮಾಂಗಣದ ಪ್ರವೇಶದ್ವಾರದಲ್ಲಿ ಮುಗುಳುನಗುತ್ತ ನಿಂತಿದ್ದಾನೆ.

ಆ ಹುಡುಗನ ಹೆಸರು ಜೈದ್ ಖಾನ್.

‘ಪ್ರಾಮಾಣಿಕವಾಗಿ ಹೇಳುತ್ತೇನೆ; ಮೊದಲು ನಾನು ಕನ್ನಡ ಸಿನಿಮಾಗಳನ್ನು ನೋಡುತ್ತಿರಲಿಲ್ಲ. ಹಿಂದಿ ಸಿನಿಮಾಗಳಲ್ಲಿ ನಟಿಸಬೇಕು ಎಂಬ ಆಸೆಯೇ ಬಲವಾಗಿತ್ತು. ಆದರೆ ಹಣ ಇದೆ, ಕೌಟುಂಬಿಕ ಹಿನ್ನೆಲೆ ಗಟ್ಟಿಯಾಗಿದೆ ಎಂಬ ಕಾರಣಕ್ಕೆ ಹಿಂದೆ ಮುಂದೆ ನೋಡದೆ ಚಿತ್ರರಂಗಕ್ಕೆ ಇಳಿಯಲು ನಾನು ಸಿದ್ಧನಿರಲಿಲ್ಲ. ನನ್ನ ಕನಸನ್ನು ನನಸು ಮಾಡಿಕೊಳ್ಳುವುದರ ಜೊತೆಜೊತೆಗೇ ಅಪ್ಪ ಅಮ್ಮನ ಮರ್ಯಾದೆಯನ್ನೂ ಉಳಿಸಬೇಕಾಗಿತ್ತು. ಹಾಗಾಗಿ ಸಾಕಷ್ಟು ಸಿದ್ಧತೆ ಮಾಡಿಕೊಂಡೇ ನಟನೆಗೆ ಇಳಿಯುವುದು ಎಂದು ನಿರ್ಧರಿಸಿದೆ. ಈ ಸಿದ್ಧತೆಯ ಕಾರಣಕ್ಕಾಗಿಯೇ ಮುಂಬೈಗೆ ಹೋದೆ. ಅಲ್ಲಿ ಒಂದು ವರ್ಷ ನಟನೆಯ ತರಬೇತಿ ಪಡೆದೆ. ಅನುಪಮ್ ಖೇರ್ ನಟನಾಶಾಲೆಯಲ್ಲಿ ತರಬೇತಿ ಪಡೆದೆ. ಆದರೆ ಅಲ್ಲಿ ತರಬೇತಿ ಪಡೆಯುತ್ತ ಪಡೆಯುತ್ತ ನಾನು ಕನ್ನಡಿಗ ಮೊದಲು ಕನ್ನಡದಲ್ಲಿ ಸಿನಿಮಾ